ಉತ್ತಮ ಬಾಂಧವ್ಯಕ್ಕೆ ಕಾರಣವಾಗಬಲ್ಲುದು. ಬಾಹ್ಯ ಸಂವಹನಾ ಕೌಶಲಗಳಾದ ಹಾವಭಾವ, ಸವಿಯಾದ ಮಾತು, ಕೊಡುಗೆಗಳನ್ನು ನೀಡುವುದು, ಮನವನ್ನು ರಂಜಿಸುವುದು – ಇವೆಲ್ಲವೂ ಸಂಬಂಧಗಳನ್ನು ಕೆಲಕಾಲ ಕಾಪಾಡಬಲ್ಲವು, ಅಷ್ಟೆ. ಆದರೆ ದೃಢವಾದ ಬಾಂಧವ್ಯವು ನಮ್ಮ ಚಾರಿತ್ರ್ಯದ ಪರಿಶುದ್ಧತೆಯಿಂದ ಮಾತ್ರವೇ ಮೂಡಿಬರುವುದಕ್ಕೆ ಸಾಧ್ಯ.

೭. ಬಾಂಧವ್ಯಗಳು ಹದಗೆಡಲು ಬೇರೆಯವರನ್ನು ದೂಷಿಸಿ ಪ್ರಯೋಜನವಿಲ್ಲ. ಸಂಬಂಧಗಳನ್ನು ಚೆನ್ನಾಗಿ ಇಟ್ಟುಕೊಳ್ಳುವ ಪ್ರಯತ್ನವನ್ನು ನಾವೇ ಮೊದಲು ಆರಂಭಿಸುವುದು ಬಹಳ ಮುಖ್ಯ. ನಮ್ಮ ಕಡೆಯಿಂದ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೆ, ಎಷ್ಟೋ ಸಂಬಂಧಗಳು ಉತ್ತಮಗೊಳ್ಳುತ್ತವೆ.

೮. ಯಾವತ್ತೂ ನಾವು ಸಂಬಂಧಗಳ ವಿಷಯದಲ್ಲಿ ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದಿರುವುದು ಒಳ್ಳೆಯದು. ಅಂದರೆ ಇತರರ ವಿಷಯದಲ್ಲಿ ನಾವು ವಿಶ್ವಾಸ ಮತ್ತು ನಂಬಿಕೆಗಳನ್ನು ದೃಢವಾಗಿರಿಸಿಕೊಳ್ಳಬೇಕು; ಗೌರವ, ಅನುಕಂಪ, ಪ್ರಾಮಾಣಿಕತೆಗಳನ್ನು ಹೊಂದಿರಬೇಕು. ಈ ವಿಷಯದಲ್ಲಿ ಸ್ಟೀಫನ್ ಕೋವಿ ಹೀಗೆ ಹೇಳುತ್ತಾರೆ: "ಭಾವನಾತ್ಮಕ ಬ್ಯಾಂಕ್ ಖಾತೆಯೆಂದರೆ ಸಂಬಂಧಗಳ ನಿರ್ಮಾಣದಲ್ಲಿ ನೀವು ತೊಡಗಿಸುವ ವಿಶ್ವಾಸದ ಮೊತ್ತವೇ ಆಗಿದೆ. ಹಾಗೆಯೇ ಇದು ಇನ್ನೊಬ್ಬ ಮಾನವಜೀವಿಯಲ್ಲಿ ನೀವು ಪರಿಭಾವಿಸುವ ಸುರಕ್ಷತೆಯ ಭಾವನೆಯೂ ಆಗಿದೆ. ನಿಮ್ಮ ಭಾವನಾತ್ಮಕ ಬ್ಯಾಂಕ್ ಖಾತೆಯಲ್ಲಿ ನೀವು ಗೌರವ, ಅನುಕಂಪ, ಪ್ರಾಮಾಣಿಕತೆ ಮತ್ತು ಕಾರ್ಯನಿಷ್ಠೆಗಳ ಮೂಲಕ ಠೇವಣಿಯನ್ನು ಹೂಡಿದ್ದೇ ಆದರೆ, ಮುಂದೆ ಅದು ದೊಡ್ಡ ಮೊತ್ತವಾಗಿ ಪರಿಣಮಿಸುವುದು." ಇದೇ ಮುಂದೆ, ಮಾನವ ಸಂಬಂಧಗಳನ್ನು ಬಲಗೊಳಿಸಲು ನಮಗೆ ಬೇಕಾಗುವ ಅಪಾರ ಮಾನಸಿಕ ಹಾಗೂ ಭಾವನಾತ್ಮಕ ಶಕ್ತಿಯ ಆಗರವಾಗಿಯೂ ಪರಿಣಮಿಸಬಲ್ಲುದು.

೯. ನಾವು ಯಾರಲ್ಲಿ ಬಾಂಧವ್ಯವನ್ನು ಬೆಳೆಸುತ್ತೇವೆಯೋ, ಆ ವ್ಯಕ್ತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದೂ ಬಹಳ ಮುಖ್ಯ. ಆ ವ್ಯಕ್ತಿಯ ಅಂತರಾಳದ ಅನಿಸಿಕೆಗಳು, ಭಾವನೆಗಳು, ಇಷ್ಟಾನಿಷ್ಟಗಳು – ಇವುಗಳನ್ನು ವಸ್ತುನಿಷ್ಠವಾಗಿ ಅರ್ಥಮಾಡಿಕೊಂಡು, ಅವುಗಳಿಗೆ ಸಕಾರಾತ್ಮಕವಾಗಿ ಮತ್ತು ಕಳಕಳಿಯಿಂದ ಪ್ರತಿಸ್ಪಂದಿಸುವುದು ಆರೋಗ್ಯಕರ ಸಂಬಂಧಕ್ಕೆ ಅತ್ಯಂತ ಅವಶ್ಯ. ಅದಕ್ಕಾಗಿ ಆ ವ್ಯಕ್ತಿಯ ಮಾತುಗಳನ್ನು ತುಂಬು ಆಸಕ್ತಿಯಿಂದ ಕೇಳಿಸಿಕೊಳ್ಳುವುದು, ಪ್ರೋತ್ಸಾಹ ಮತ್ತು ಉತ್ತೇಜನದ ಮಾತುಗಳನ್ನು ಆಡುವುದು – ಇವು ಸಂಬಂಧಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

೧೦. ಮಾನವೀಯ ಬಾಂಧವ್ಯದಲ್ಲಿ ಸ್ಪರ್ಧೆಯ ಮನೋಭಾವ ಇರಕೂಡದು; ಪರಸ್ಪರ ಸಹಕಾರ ಮನೋಭಾವ ಇರಬೇಕು. ಇದನ್ನು ಇಂಗ್ಲಿಷಿನಲ್ಲಿ 'Win / Win Situation' – 'ಇಬ್ಬರಿಗೂ ಒಳಿತಾಗುವ ಸಂದರ್ಭ' ಎನ್ನುತ್ತಾರೆ. ಯಾವುದೇ ಸಂಬಂಧವು ಒಬ್ಬ ನಿರ್ದಿಷ್ಟ ವ್ಯಕ್ತಿಯ ಹಿತಾಸಕ್ತಿಗೆ ಮಾತ್ರವೇ ಅನುಕೂಲವಾಗಿದ್ದು, ಇನ್ನೊಬ್ಬನ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವಂತಿದ್ದರೆ ಅದು ನ್ಯಾಯಯುತವಾದ ಸಂಬಂಧವಾಗಲಾರದು; ಹಾಗೆಯೇ ಅದು ಹೆಚ್ಚುಕಾಲ ಇರುವುದಕ್ಕೂ ಸಾಧ್ಯವಿಲ್ಲ.

ಸಂಪೂರ್ಣ ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವುದಾದರೆ, ಭಗವಂತನಲ್ಲಿ ಭಕ್ತಿ, ಎಲ್ಲವೂ ಭಗವಂತನ ಇಚ್ಛೆಯೆಂಬ ಮನೋಭಾವ, ಅಸಕ್ತ ಬುದ್ಧಿ, ಸಾಕ್ಷೀಪ್ರಜ್ಞೆ, ಜಗತ್ತು ಮತ್ತು ತನ್ನ ಬಗ್ಗೆ ಸಕಾರಾತ್ಮಕ ಧೋರಣೆ ಹಾಗೂ ವ್ಯಕ್ತಿಗತ ಮಾನಸಿಕ ತೃಪ್ತಿ ಮತ್ತು ಆನಂದಗಳು ನಮ್ಮೆಲ್ಲ ಮಾನವೀಯ ಸಂಬಂಧಗಳನ್ನೂ ಮಧುರವನ್ನಾಗಿ ಮಾಡುತ್ತವೆ.

**"ಬೇರೆಯವರು ಯಾವ ರೀತಿ ನಡೆದುಕೊಳ್ಳಬೇಕೆಂದು ನಾವು ಬಯಸುತ್ತೇವೆಯೋ, ಅದೇ ರೀತಿ ನಾವು ಕೂಡ ಇತರರ ಜೊತೆ ನಡೆದುಕೊಳ್ಳಬೇಕು"** – ಇದು ಧರ್ಮದ ಪ್ರಾಚೀನ ವ್ಯಾಖ್ಯಾನ. ಈ ಬಗೆಯ ಆದರ್ಶ ಧರ್ಮಾಚರಣೆಯಿಂದ ಮಾತ್ರವೇ ಉತ್ತಮ ಮಾನವೀಯ ಬಾಂಧವ್ಯ ಎಲ್ಲ ಕಾಲಕ್ಕೂ, ಎಲ್ಲರಲ್ಲಿಯೂ ಸಾಧ್ಯ. ಹಾಗೆ ನಡೆದುಕೊಳ್ಳಲು ಪ್ರಯತ್ನಿಸೋಣವೇ?

## ಉತ್ತಮ ಸಂಬಂಧದ ಸೂತ್ರಗಳು

೧. ನಮ್ಮ ವ್ಯಕ್ತಿತ್ವದ ಸಮತೋಲನವನ್ನು ಕಾಪಾಡಿಕೊಂಡು, ಅದೇ ಸಮಯದಲ್ಲಿ ಇತರರಿಗೆ ಸಹಾಯ ಮಾಡಲು ಮುಂದಾಗಬೇಕು.

೨. ನಮ್ಮ ಮಾನಸಿಕ ಶಕ್ತಿಯನ್ನು ಇತರರು ಗುರುತಿಸುವಂತೆ ನಮ್ಮ ನಡವಳಿಕೆ ಇರಬೇಕು. ನಮ್ಮ ಆಂತರಿಕ ಶಕ್ತಿಯನ್ನು ನಾವು ಹೊರಗಿನ ಜಗತ್ತಿನ ಕೆಟ್ಟ ಪ್ರಭಾವದಿಂದ ಸರ್ವಥಾ ರಕ್ಷಿಸಿಕೊಳ್ಳಬೇಕು.

೩. ಅಹಿಂಸೆಯ ಭಾವನೆ, ದೈಹಿಕ ಶಕ್ತಿಗಿಂತಲೂ ಪರಿಣಾಮಕಾರಿಯಾದದ್ದು. ಈ ರೀತಿಯ ಅಹಿಂಸಾ ಭಾವನೆಯನ್ನು ನಾವು ದೈಹಿಕ, ವಾಚಿಕ, ಮಾನಸಿಕ – ಈ ಮೂರೂ ಸ್ತರದಲ್ಲಿ ಆಚರಣೆಯಲ್ಲಿ ತರಬೇಕು.

೪. ರಾಗ-ದ್ವೇಷಗಳನ್ನು ನಿವಾರಿಸಿಕೊಳ್ಳಬೇಕು. ವಿಪರೀತ ಆಸಕ್ತಿಯು ಕೂಡ ದ್ವೇಷದಷ್ಟೇ ಕೆಡುಕಾದುದು. ಕೋಪವು ಕಾಮದಷ್ಟೇ ಭೀಕರವಾದುದು.

೫. ಮಾನವ ಜನಾಂಗ ನಿಂತಿರುವುದು, ಪರಸ್ಪರ ಸಹಕಾರ ಮತ್ತು ಅವಲಂಬನೆಗಳ ಮೇಲೆ. 'ಶಕ್ತಿಶಾಲಿಯಾದವನೇ ಉಳಿಯುತ್ತಾನೆ' ಎನ್ನುವ ಡಾರ್ವಿನ್ ಸಿದ್ಧಾಂತವು ನಾಗರಿಕರಾದ ಮಾನವರ ವಿಷಯದಲ್ಲಿ ಅಪ್ರಸ್ತುತ ಮಾತ್ರವಲ್ಲ, ಭೀಕರ ಪರಿಣಾಮ ಉಂಟುಮಾಡುವಂಥದ್ದು.

೬. ಆಸಕ್ತಿ ಮತ್ತು ದ್ವೇಷ – ಇವುಗಳನ್ನು ಮೀರಿಹೋಗುವುದೇ ಒಬ್ಬ ಆಧ್ಯಾತ್ಮಿಕ ವ್ಯಕ್ತಿಯ ಆದರ್ಶ.

೭. ಆಧ್ಯಾತ್ಮಿಕ ವ್ಯಕ್ತಿಯಾದವನು ಸರ್ವಜೀವಿಗಳ ಹಿತವನ್ನೇ ಬಯಸುತ್ತಾನೆ; ಎಲ್ಲರಲ್ಲೂ ಅನುಕಂಪವನ್ನೇ ಹರಿಸುತ್ತಾನೆ.

೮. ಬೇರೆಯವರು ನಮ್ಮ ಒಳ್ಳೆಯತನದ ದುಷ್ಪ್ರಯೋಜನವನ್ನು ಪಡೆದುಕೊಳ್ಳದಿರುವಂತೆ ನಾವು ಎಚ್ಚರವಹಿಸಬೇಕು. ನಮ್ಮ ಒಳ್ಳೆಯತನವು ಬೇರೆಯವರ ದೃಷ್ಟಿಯಲ್ಲಿ ದೌರ್ಬಲ್ಯದ ಸಂಕೇತವಾಗಬಾರದು.

# ಬುದ್ಧ ಮರಳಿ ತಾಯ್ನಾಡಿಗೆ

ಸ್ವಾಮಿ ರಾಘವೇಶಾನಂದ

**(ಮೇ ಸಂಚಿಕೆಯಿಂದ)**

*(ಬುದ್ಧನು ತನ್ನ ತಾಯ್ನಾಡಾದ ಕಪಿಲವಸ್ತುವಿಗೆ ಬರುತ್ತಾನೆ. ಅಲ್ಲಿ ಭಿಕ್ಷೆ ಬೇಡುತ್ತಾನೆ. ತನ್ನ ತಂದೆಯ ಜೊತೆಗೆ ಅರಮನೆಗೆ ಬರುತ್ತಾನೆ...)*

**ಅ**ರಮನೆಯ ದಾಸಿಯೊಬ್ಬಳು, ಮಹಾರಾಜನು ಒಬ್ಬ ಭಿಕ್ಷುವಿನೊಡನೆ ಬರುತ್ತಿರುವುದನ್ನು ನೋಡಿದಳು. ಓಡಿಹೋಗಿ, ಅಂತಃಪುರದಲ್ಲಿದ್ದ ರಾಣಿ ಗೌತಮಿ, ಯಶೋಧರೆ ಮತ್ತು ಬಾಲಕ ರಾಹುಲ ಮುಂತಾದವರಿಗೆ ವಿಷಯ ತಿಳಿಸಿದಳು. ಎಲ್ಲರೂ ಮೊಗಸಾಲೆಗೆ ಬಂದರು; ಭಿಕ್ಷು ಮತ್ತು ಮಹಾರಾಜ – ಇಬ್ಬರೂ ಅರಮನೆಯ ಸಮೀಪಕ್ಕೆ ಬರುತ್ತಿರುವುದನ್ನು ಕಂಡರು. ಯಶೋಧರೆ ತನ್ನ ಮಗ ರಾಹುಲನಿಗೆ, ಬುದ್ಧನೆಡೆಗೆ ಕೈತೋರಿಸಿ ಹೀಗೆ ಹೇಳಿದಳು: "ಮಗನೇ, ನಿನ್ನ ತಾತನ ಕೈಯನ್ನು ಹಿಡಿದುಬರುತ್ತಿರುವ ಭಿಕ್ಷುವು ಕಾಣಿಸುತ್ತಿಲ್ಲವೇ?" ರಾಹುಲನು ಹೌದೆಂದು ತಲೆಯಾಡಿಸಿದನು.



ಯಶೋಧರೆ ಮುಂದುವರೆಸಿದಳು, "ಅವರು ನಿನ್ನ ತಂದೆ. ಕೆಳಗಿಳಿದು ಹೋಗಿ ಗೌರವದಿಂದ ಬರಮಾಡಿಕೋ. ಅವರು ನಿನಗೆ ಅಮೂಲ್ಯವಾದ ಆಸ್ತಿಯನ್ನು ಕೊಡುತ್ತಾರೆ. ಕೇಳಿ ಪಡೆದುಕೋ." ಈ ಮಾತನ್ನು ಕೇಳಿ ರಾಹುಲನು ಕೆಳಗಿಳಿದು ಓಡಿದನು. ತನ್ನೆಡೆಗೆ ಬರುತ್ತಿರುವ ಹುಡುಗ ತನ್ನ ಮಗನೇ ಎಂದು ಬುದ್ಧನಿಗೆ ತಿಳಿಯಿತು. ಅವನನ್ನು ಬರಮಾಡಿಕೊಳ್ಳಲು ತನ್ನ ಎರಡೂ ಕೈಗಳನ್ನು ಚಾಚಿದನು. ರಾಹುಲ ಹತ್ತಿರ ಬಂದದ್ದೇ ಬುದ್ಧನು ಅವನನ್ನು ಪ್ರೀತಿಯಿಂದ ಆಲಿಂಗಿಸಿದನು. ಅವನ ಅಪ್ಪುಗೆಯಿಂದ ಆನಂದಭರಿತನಾದ ರಾಹುಲ, ಒಡನೆ ಅವನಿಂದ ಬಿಡಿಸಿಕೊಂಡು, ಬುದ್ಧನನ್ನೇ ದಿಟ್ಟಿಸಿನೋಡುತ್ತ ಹೇಳಿದನು: "ಗೌರವಾನ್ವಿತ ಸಂನ್ಯಾಸಿಗಳೇ, ನನಗೆ ಬರಬೇಕಾದ ಒಂದು ದೊಡ್ಡ ಸೊತ್ತು ನಿಮ್ಮ ಬಳಿ ಇದೆ ಎಂದು ನನ್ನ ತಾಯಿ ಹೇಳಿದ್ದಾಳೆ. ಅದನ್ನು ಕೇಳಿ ತೆಗೆದುಕೋ ಎಂದೂ ಹೇಳಿದ್ದಾಳೆ. ದಯವಿಟ್ಟು ಅದನ್ನು ನನಗೆ ದಯಪಾಲಿಸುವಿರಾ?"

ಬುದ್ಧನು ರಾಹುಲನ ಕೆನ್ನೆಯನ್ನು ಪ್ರೀತಿಯಿಂದ ತಟ್ಟಿದನು. ಮತ್ತೆ ಹೇಳಿದನು, "ನಿನ್ನ ಪಿತ್ರಾರ್ಜಿತ ಬಳುವಳಿ ನಿನಗೆ ಬೇಕೋ? ಒಳ್ಳೆಯ ಗಳಿಗೆಯಲ್ಲಿ ನಾನೇ ನಿನಗೆ ಅದನ್ನು ಕೊಡುತ್ತೇನೆ."

ಬುದ್ಧ ಒಂದು ಕೈಯಿಂದ ತನ್ನ ತಂದೆಯ ಕೈಯನ್ನು ಹಿಡಿದಿದ್ದನು. ಇನ್ನೊಂದರಿಂದ ರಾಹುಲನ ಕೈಯನ್ನು ಹಿಡಿದುಕೊಂಡಿದ್ದನು. ಮೂವರೂ ಜೊತೆಯಾಗಿಯೇ ಅರಮನೆಯನ್ನು ಪ್ರವೇಶಿಸಿದರು. ರಾಣಿ ಗೌತಮಿ, ಯಶೋಧರೆ ಮತ್ತು ಬುದ್ಧನ ಸಹೋದರಿ ನಂದಾ ಮೆಟ್ಟಿಲಿಳಿದು ಬಂದು, ಮಹಾರಾಜ, ಬುದ್ಧ ಮತ್ತು ರಾಹುಲರು ಅರಮನೆಯ ಉದ್ಯಾನವನವನ್ನು ಪ್ರವೇಶಿಸುವುದನ್ನು ಕಂಡರು. ಬುದ್ಧ ತನ್ನ ಸಹಚರರೊಡನೆ ಉದ್ಯಾನವನದಲ್ಲಿದ್ದ ಅಮೃತಶಿಲೆಯ ಹಾಸಿನ ಮೇಲೆ ಕುಳಿತನು. ರಾಜಮನೆತನದ ಮಹಿಳೆಯರು ಉದ್ಯಾನವನವನ್ನು ಪ್ರವೇಶಿಸುತ್ತಿರುವುದನ್ನು ಕಂಡ ಬುದ್ಧ, ಮೇಲೆದ್ದು ಅವರ ಕಡೆಗೆ ನಡೆದನು. ತಂಗಿ ನಂದಾ ಬೆಳೆದು ಬಹಳ ಸುಂದರಿಯಾಗಿ ಕಾಣುತ್ತಿದ್ದಳು. ಇವರೆಲ್ಲರ ಭೇಟಿಯಾಗಿ ಹನ್ನೆರಡು ವರ್ಷಗಳೇ ಕಳೆದುಹೋಗಿದ್ದವು. ಮೂವರು ಸ್ತ್ರೀಯರೂ ಸರಳವಾಗಿ ಅಲಂಕರಿಸಿಕೊಂಡಿದ್ದರು. ಅವರ ಮುಖ ತೇಜಸ್ಸಿನಿಂದ ಬೆಳಗುತ್ತಿತ್ತು. ಆದರೂ ಕಣ್ಣುಗಳಲ್ಲಿ ಹೇಳಿಕೊಳ್ಳಲಾಗದ ಯಾವುದೋ ಒಂದು ದುಃಖ ಆವರಿಸಿಕೊಂಡಿತ್ತು.

ಬುದ್ಧ ನಿಧಾನವಾಗಿ ಯಶೋಧರೆಯ ಹತ್ತಿರ ಬಂದನು; ಆಕೆಯ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡನು. ಅವಳ ಕಣ್ಣುಗಳಿಂದ ಅವನ ಕೈಯ ಮೇಲೆ ಕೆಲವು ಬಿಂದುಗಳು ಉದುರಿದವು. ಅವಳ ಕೈಗಳು ದುಃಖ, ಸಂತೋಷ ಮತ್ತು ಆಶ್ಚರ್ಯ – ಈ ಎಲ್ಲ ಭಾವನೆಗಳ ಸಂಗಮದಿಂದ ಕಂಪಿಸುತ್ತಿದ್ದವು. ಬುದ್ಧ ಯಶೋಧರೆಯನ್ನು ರಾಣಿ ಗೌತಮಿಯ ಪಕ್ಕಕ್ಕೆ ಕರೆದೊಯ್ದು ಕುಳ್ಳಿರಿಸಿದನು. ಒಂದು ಅಸಹಜ ಮೌನ ಎಲ್ಲರನ್ನೂ ಆವರಿಸಿತ್ತು. ಅರಮನೆಯ ಕಡೆಗೆ ಬರುತ್ತಿದ್ದಾಗ ರಾಜನು ಬುದ್ಧನನ್ನು ಕುರಿತು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದನು. ಆದರೆ ಈಗ ಎಲ್ಲರ ಜೊತೆಗೆ ಅವನೂ ಮೌನವಾಗಿಬಿಟ್ಟನು.

ಕಡೆಗೆ ಬುದ್ಧನೇ ಮೌನವನ್ನು ಮುರಿದನು, "ನೋಡಿ, ಮತ್ತೆ ನಾನು ಹಿಂತಿರುಗಿ ಬಂದಿದ್ದೇನೆ. ಅಮ್ಮಾ, ನೋಡು. ನಾನು ನಿನ್ನ ಬಳಿಗೆ ಬಂದಿದ್ದೇನೆ." ಅಲ್ಲಿದ್ದ ಆ ಮಹಿಳೆಯರ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಯತೊಡಗಿತು. ಅದು ಸಂತಸದ ಕಣ್ಣೀರು! ಹಲವು ವರ್ಷಗಳ ಅಗಲಿಕೆಯ ಕಣ್ಣೀರು! ಅವರನ್ನು ಮೌನವಾಗಿ ಅಳಲು ಬಿಟ್ಟು, ಬುದ್ಧನು ತನ್ನ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ರಾಹುಲನನ್ನು ಕರೆದನು. ಹತ್ತಿರಕ್ಕೆ ಬಂದ ರಾಹುಲನನ್ನು ತನ್ನ ಬಳಿ ಕೂರಿಸಿಕೊಂಡು ಅವನ ತಲೆಯನ್ನು ಮೃದುವಾಗಿ ನೇವರಿಸಿದನು.

ಗೌತಮಿ ತನ್ನ ಸೀರೆಯಂಚಿನಿಂದ ಕಂಬನಿಯನ್ನು ಒರೆಸಿಕೊಂಡು, ಮುಗುಳ್ನಗುತ್ತ ಬುದ್ಧನಿಗೆ ಹೇಳಿದಳು: "ನೀನು ದೀರ್ಘಕಾಲದವರೆಗೆ ನಮ್ಮನ್ನು ಅಗಲಿ ಹೊರಟುಹೋದೆ. ಅದಾಗಿ ಈಗಾಗಲೇ ಏಳು ವರ್ಷಗಳು ಕಳೆದುಹೋಗಿವೆ. ಯಶೋಧರೆ ಎಷ್ಟು ಧೈರ್ಯಶಾಲಿಯಾದ ಹೆಣ್ಣೆಂಬುದು ಈಗ ನಿನಗೆ ಅರ್ಥವಾಯಿತೇ?"